**ಒ ಎಸ್ ನಂ.5921/2017**
**ಪಿ.ಡಬ್ಲ್ಯೂ:1**

**ಒ ಎಸ್ ನಂ.5921/2017**
**ಪಿ.ಡಬ್ಲ್ಯೂ:1**

ಒ ಎಸ್ ನಂ.**5921/2017**
ಪಿ.ಡಬ್ಲ್ಯೂ:**1**

**ದಿನಾಂಕ: 01.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:ಶ್ರೀ. ಇ.ಟಿ. ದಿವಾಕರ್., 1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದ:-**

ನನ್ನ ಮದುವೆ 2001 ರಲ್ಲಿ ಆಗಿರುತ್ತದೆ. ನನ್ನ ಮದುವೆ ಅರೇಂಜ್ ಮ್ಯಾರೇಜ್ ಆಗಿರುತ್ತದೆ. ನಾನು ಬಿ.ಎಸ್ಸಿ., ಓದಿರುತ್ತೇನೆ. ಮದುವೆ ಕಾಲಕ್ಕೆ ನಾನು Medical Transcriptionist ಆಗಿ ಕೆಲಸ ಮಾಡುತ್ತಿದ್ದೆನು. ಮದುವೆಯಾದ ಮೇಲೆ ನಾನು ನನ್ನ ಗಂಡನ ಮನೆಯಲ್ಲಿ ವಾಸಿಸುತ್ತಿದ್ದೆನು. ಆ ಕಾಲಕ್ಕೆ ನನ್ನ ಗಂಡನ ತಂದೆ-ತಾಯಿ, ತಂಗಿ ಮತ್ತು ನಾನು ಎಲ್ಲರು ಕೂಡಿ ವಾಸಿಸುತ್ತಿದ್ದೆವು. ನನ್ನ ಗಂಡನ ಮನೆ ಬೆಂಗಳೂರಿನ ಸಿ.ವಿ. ರಾಮನ್ ನಗರದಲ್ಲಿರುತ್ತದೆ. ಮದುವೆಯಾದ ಮೇಲೆ ನನ್ನ ಗಂಡನ ಜೊತೆ ಒಂದುವರೆ ವರ್ಷ ವಾಸವಾಗಿದ್ದೆನು. ಮದುವೆಯಾದ ಮೇಲೆ ನಾನು ಗಂಡನ ಜೊತೆ ಒಂದುವರೆ ವರ್ಷ ವಾಸವಾಗಿರಲಿಲ್ಲ ಮತ್ತು ಕೆಲವೇ ತಿಂಗಳುಗಳವರೆಗೆ ವಾಸವಾಗಿದ್ದೆ ಎನ್ನುವುದು ಸರಿಯಲ್ಲ. ನನಗೆ ಇಬ್ಬರು ಮಕ್ಕಳು ಜನಿಸಿದರು. ಒಂದು ಮಗು ತೀರಿಕೊಂಡಿದೆ, ಒಂದು ಮಗು ಜೀವಂತವಿದೆ. ನನ್ನ ಮಗ ಈಗ ನನ್ನ ಜೊತೆ ಇದ್ದಾನೆ, ಆತ ಡಿಗ್ರಿ ಓದುತ್ತಿದ್ದಾನೆ. ನನ್ನ ಮಗ ನನ್ನ ಜೊತೆ ವಾಸವಾಗಿಲ್ಲ ಮತ್ತು ಬೇರೆ ಕಡೆಗೆ ರೂಮ್ ಮಾಡಿಕೊಂಡು ವಿದ್ಯಾಭ್ಯಾಸ ಮಾಡುತ್ತಿದ್ದಾನೆ ಮತ್ತು ಆತನ ಖರ್ಚು ವೆಚ್ಚವನ್ನು 1 ನೇ ಪ್ರತಿವಾದಿಯೇ ಕೊಡುತ್ತಿದ್ದಾನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ನನ್ನ ಮಗನ ಜೀವನಾಂಶಕ್ಕೆ ಸ್ವಲ್ಪ ದಿನಗಳವರೆಗೆ ಹಣ ಕೊಟ್ಟಿದ್ದಾನೆ ಎನ್ನುತ್ತಾಳೆ. 1 ನೇ ಪ್ರತಿವಾದಿ ನನಗೆ ಕೊಡುತ್ತಿರುವ ಜೀವನಾಂಶ ಹಣದಿಂದಲೇ ನನ್ನ ಜೀವನ ನಡೆಯುತ್ತಿದೆ ಮತ್ತು ನನಗೆ ಬೇರೆ ಯಾವುದೇ ಆದಾಯವಿಲ್ಲ ಎನ್ನುವುದು ನಿಜ. ಸಾಕ್ಷಿ ಮುಂದುವರೆದು ನನ್ನ ತಂದೆ ತೀರಿಕೊಂಡಿದ್ದಾನೆ ಈಗ ತಾಯಿ ಮನೆಯಲ್ಲಿದ್ದೇನೆ ಎನ್ನುತ್ತಾಳೆ.

ನನ್ನ ಗಂಡನ ಮನೆ ಬಿಡುವಾಗ ನನ್ನ ಮಗನಿಗೆ 3 ತಿಂಗಳು ವಯಸ್ಸಾಗಿತ್ತು. ನಾನು ಗರ್ಭಿಣಿಯಾದಗಿನಿಂದ ಹೆರಿಗೆಯಾಗುವವರೆಗೆ ನನ್ನನ್ನು ನನ್ನ ಗಂಡನೇ ನೋಡಿಕೊಂಡಿದ್ದಾನೆ ಎನ್ನುವುದು ಸರಿಯಲ್ಲ. ನಾನು ಗಂಡನ ಜೊತೆ ಜಗಳವಾಡಿ ನನ್ನಷ್ಟಕ್ಕೆ ನಾನೇ ಮನೆಯಿಂದ ಹೊರಗೆ ಹೋಗಿದ್ದೇನೆ ಎನ್ನುವುದು ಸರಿಯಲ್ಲ. ನಾನು ಪುನಃ ಗಂಡನ ಮನೆಗೆ ಹೋಗಲು ಪ್ರಯತ್ನ ಮಾಡಿರುತ್ತೇನೆ. ನನ್ನ ಗಂಡ ಬಂದು ನನ್ನನ್ನು ಆತನ ಮನೆಗೆ ಕರೆದರು ಕೂಡ ನಾನು ಆತನ ಜೊತೆ ಹೋಗಿಲ್ಲ ಎನ್ನುವುದು ಸರಿಯಲ್ಲ. 2010 ರಲ್ಲಿ ನನ್ನ ಮಗ 1 ನೇ

ತರಗತಿಯಲ್ಲಿ ಓದುತ್ತಿದ್ದಾಗ ನಾನು ನನ್ನ ಗಂಡನ ಮನೆಗೆ ಹೋಗಿದ್ದೆನು. ನನ್ನ ಮಾವ ತೀರಿಕೊಳ್ಳುವವರೆಗೆ ಅಂದರೆ ಜನವರಿ-2015 ವರೆಗೆ ಗಂಡನ ಮನೆಯಲ್ಲಿದ್ದೆನು. 2015 ರಲ್ಲಿ ನಾನು ನನ್ನ ತಾಯಿ ಮನೆಗೆ ಬಂದೆನು.

2007 ರಲ್ಲಿ ಜನೋದಯ ಎನ್ನುವ ಮಹಿಳಾ ಸಹಾಯವಾಣಿಗೆ ನನ್ನ ಗಂಡನ ವಿರುದ್ಧ ದೂರು ಕೊಟ್ಟಿದ್ದೆನು. ಆ ದೂರಿನ ಪ್ರತಿ ನನ್ನ ಬಳಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ಜನೋದಯ ಸಂಸ್ಥೆಯವರೇ ವಕೀಲರನ್ನು ನೇಮಿಸಿ ನನ್ನ ಗಂಡನ ವಿರುದ್ಧ ಜೀವನಾಂಶದ ಕೇಸು ದಾಖಲಿಸಿದ್ದರು ಎನ್ನುತ್ತಾಳೆ. ಜನೋದಯ ಸಂಸ್ಥೆ ಇದು ಸರ್ಕಾರದ ಸಂಸ್ಥೆ ಅಥವಾ ಖಾಸಗಿ ಸಂಸ್ಥೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಜನೋದಯ ಸಂಸ್ಥೆಗೆ ಹೋಗಿರಲಿಲ್ಲ, ಆದ್ದರಿಂದ ಆ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎನ್ನುವುದು ಸರಿಯಲ್ಲ. ನಾನು ವೈವಾಹಿಕ ಹಕ್ಕುಗಳ ಪುನರ್ ಪ್ರಾಪ್ತಿಗಾಗಿ ನನ್ನ ಗಂಡನ ವಿರುದ್ಧ ಅರ್ಜಿ ದಾಖಲಿಸಿರಲಿಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡ ವಿವಾಹ ವಿಚ್ಛೇದನ ಕೋರಿ ಸಲ್ಲಿಸಿದ ಅರ್ಜಿಗೆ ತಕರಾರು ಸಲ್ಲಿಸಿದ್ದೆ ಎನ್ನುತ್ತಾರೆ. ನಾನು ನನ್ನ ಗಂಡನ ವಿರುದ್ಧ ಪದೇ-ಪದೇ ಸುಳ್ಳು ಕೇಸುಗಳನ್ನು ದಾಖಲಿಸುತ್ತಾ ಬಂದಿದ್ದೇನೆ ಎನ್ನುವುದು ಸರಿಯಲ್ಲ. ನಾನು ನನ್ನ ಮಾವ ತೀರಿಕೊಳ್ಳುವವರೆಗೆ ಗಂಡನ ಮನೆಯಲ್ಲಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮಾವನ ಖಾತೆಯಲ್ಲಿದ್ದ 18 ಲಕ್ಷ ರೂಪಾಯಿಗಳನ್ನು ನಾನು ಪಡೆದಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮಾವ ಆತನ ಬ್ಯಾಂಕ್ ಖಾತೆಗೆ ನನ್ನನ್ನು ನಾಮಿನಿ ಮಾಡಿದ್ದ, ಅದರ ಪ್ರಕಾರ 7.5 ಲಕ್ಷ ರೂಪಾಯಿ ಪಡೆದಿದ್ದೇನೆ ಎನ್ನುತ್ತಾರೆ. ನನ್ನ ಮಾವ ಆತನ ಬ್ಯಾಂಕ್ ಖಾತೆಯನ್ನು ನಮ್ಮ ಮದುವೆಗೆ ಮುಂಚೆಯೇ ತೆರೆದಿದ್ದ ಎನ್ನುವುದು ಸರಿಯಲ್ಲ. ನಾನು ನನ್ನ ಗಂಡನ ವಿರುದ್ಧ ನನ್ನ ಮಾವನಿಗೆ ಸುಳ್ಳು ಹೇಳಿ ಆತನ ಬ್ಯಾಂಕ್ ಖಾತೆಗೆ ನನ್ನನ್ನು ನಾಮಿನಿಯಾಗಿ ಮಾಡುವಂತೆ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮಾವ ನನ್ನನ್ನು ನಾಮಿನಿಯಾಗಿ ಮಾಡಿರುವ ವಿಷಯ ನನ್ನ ಗಂಡನಿಗೆ ಗೊತ್ತಿತ್ತು. ನನ್ನ ಮಾವ ಜೀವಂತವಿರುವ ಕಾಲಕ್ಕೆ ಮನೆಯ ಎಲ್ಲಾ ಖರ್ಚು ವೆಚ್ಚಗಳನ್ನು ನನ್ನ ಗಂಡನೇ ನೋಡಿಕೊಳ್ಳುತ್ತಿದ್ದ ಎನ್ನುವುದು ಸರಿಯಲ್ಲ. ನನ್ನ ಮಾವ ತೀರಿಕೊಳ್ಳುವವರೆಗೆ ನಾನು ವಾಸವಾಗಿದ್ದ ನನ್ನ ತಂದೆಯ ಮನೆಯಲ್ಲಿಯೇ ನನ್ನ ಜೊತೆ ವಾಸವಾಗಿದ್ದ ಎನ್ನುವುದು ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ನನ್ನ ಮಾವನನ್ನು ನನ್ನ ತಂದೆಯ ಮನೆಗೆ

ಕರೆಯಿಸಿಕೊಂಡು ಆತನ ಹಣವನ್ನು ದೋಚಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮಾವನಿಗೆ ವಯಸ್ಸಾಗಿದ್ದ ಕಾರಣ ಆತನಿಗೆ ಸರಿಯಾಗಿ ವ್ಯವಹಾರ ಜ್ಞಾನ ಇರಲಿಲ್ಲ ಮತ್ತು ಆ ಕಾಲಕ್ಕೆ ನನ್ನ ಮಾವನನ್ನು ನನ್ನ ಮನೆಗೆ ಕರೆದುಕೊಂಡು ಹೋಗಿ ಆತನ ಬ್ಯಾಂಕ್ ಖಾತೆಗೆ ಬರುವ ಬಡ್ಡಿ ಕೂಡ ನನಗೆ ಸಿಗುವಂತೆ ಮಾಡಿಕೊಂಡಿದ್ದೆ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿಗೆ ಆತನ ಟ್ರಾವೆಲ್ ಏಜೆನ್ಸಿಯಿಂದ ಒಳ್ಳೆಯ ಆದಾಯವಿತ್ತು ಮತ್ತು ನಮ್ಮನ್ನೆಲ್ಲಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಎನ್ನುವುದು ಸರಿಯಲ್ಲ. ನನ್ನ ಗಂಡನಿಂದ ನಾನು ಜೀವನಾಂಶ ಹಣ ಪಡೆಯುತ್ತಿದ್ದೇನೆ ಎಂದರೆ ಸಾಕ್ಷಿ ಮಧ್ಯಂತರ ಜೀವನಾಂಶ ಆದೇಶವಾಗಿದೆ ಸ್ವಲ್ಪ ದಿನಗಳವರೆಗೆ ಮಾತ್ರ ಜೀವನಾಂಶ ನೀಡಿದ್ದಾನೆ ಎನ್ನುತ್ತಾರೆ. ಮಧ್ಯಂತರ ಜೀವನಾಂಶ ಆದೇಶದ ಮೇಲೆ ವಸೂಲಾತಿಗಾಗಿ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯ ಮುಕ್ತಾಯಗೊಳಿಸಿದೆ ಎನ್ನುವುದು ನಿಜ.

ನಿಪಿ.1 ರ ಮೂಲ ಕ್ರಯಪತ್ರ ನನ್ನ ಗಂಡನ ಮನೆಯಲ್ಲಿದೆ. ನಿಪಿ.1 ಕ್ರಯಪತ್ರದ ಮೇಲೆ Paul William Jayakumar ಎಂದು ನನ್ನ ಮಾವನ ಹೆಸರು ಇರುತ್ತದೆ. ಅದು ಸಹಿ ಅಥವಾ ಹೆಸರು ಎನ್ನುವುದು ನನಗೆ ಗೊತ್ತಿಲ್ಲ. ನಿಪಿ.1 ರ ಮೂಲ ಪ್ರತಿ 1 ನೇ ಪ್ರತಿವಾದಿಯ ಬಳಿ ಇದೆ ಎಂದು ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಅದು ನಮ್ಮ ವಕೀಲರಿಗೆ ಗೊತ್ತು ಎನ್ನುತ್ತಾರೆ. ನಿಪಿ.4 ಇದು ನನ್ನ ಮಾವ ಬರೆದ ವಿಲ್ ಆಗಿದೆ. ನಿಪಿ.4 ವಿಲ್ ನಲ್ಲಿ ಇರುವ ಸಹಿ ನನ್ನ ಮಾವನ ಸಹಿಯಾಗಿದೆ. ನಿಪಿ.1 ಕ್ರಯಪತ್ರದಲ್ಲಿ ನನ್ನ ಮಾವನ ಹೆಸರು ಇರುತ್ತದೆ. ನನ್ನ ಮಾವನ ಸಹಿ ಇದೇ ರೀತಿ ಇದೆ ಎಂದು ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸಾಕ್ಷಿ ಮುಂದುವರೆದು ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ನನ್ನ ಮಾವನ ಸಹಿ ಇದೆ ಎನ್ನುತ್ತಾರೆ. ನಿಪಿ.4 ವಿಲ್ ನ ಮೂಲ ಪ್ರತಿ 1 ನೇ ಪ್ರತಿವಾದಿಯ ಬಳಿ ಇರುತ್ತದೆ. ನಿಪಿ.4 ರ ಮೂಲ ವಿಲ್ ನನ್ನ ಗಂಡನ ಬಳಿ ಇದೆ ಎಂದು ವಾದಪತ್ರದಲ್ಲಿ ಬರೆಯಿಸಿದ್ದೇನೆ. ನಿಪಿ.4 ರ 3 ನೇ ಪುಟದಲ್ಲಿ ನನ್ನ ಮಾವನ ಸಹಿ ಇಲ್ಲ ಎನ್ನುವುದು ನಿಜ. ಸಾಕ್ಷಿ ಮುಂದುವರೆದು ಮಿಸ್ಸಾಗಿರಬಹುದು ಎನ್ನುತ್ತಾರೆ. ನಿಪಿ.4 ವಿಲ್ ಇದು ಸೃಷ್ಟಿ ಮಾಡಿದ ವಿಲ್ ಆಗಿದೆ ಮತ್ತು ಇದನ್ನು ನನ್ನ ಮಾವ ಬರೆದುಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನನ್ನ ಮಾವ ಸಬ್ ರಿಜಿಸ್ಟಾರ್ ಕಚೇರಿಗೆ ಬಂದು ವಿಲ್ ಮಾಡಿಕೊಟ್ಟಿಲ್ಲ, ಅದಕ್ಕಾಗಿ ನಿಪಿ.4 ವಿಲ್ 3 ನೇ

ಪುಟದಲ್ಲಿ ಆತನ ಸಹಿ ಇಲ್ಲ ಎನ್ನುವುದು ಸರಿಯಲ್ಲ. ನಿಪಿ.4 ವಿಲ್ ನ್ನು ಈ ಪ್ರಕರಣಕೋಸ್ಕರ ಸೃಷ್ಟಿ ಮಾಡಲಾಗಿದೆ ಎನ್ನುವುದು ಸರಿಯಲ್ಲ. ನನ್ನ ಮಾವ ತೀರಿಕೊಳ್ಳುವವರೆಗೆ ವಿಲ್ ಯಾರ ಬಳಿ ಇರಬೇಕು ಎಂದು ಅದರಲ್ಲಿ ನಮೂದಿಸಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ.4 ವಿಲ್ ನ 5 ನೇ ಪುಟದಲ್ಲಿ ಒಂದು ವಾಕ್ಯವನ್ನು ಕೈಬರಹದಲ್ಲಿ ಬರೆಯಲಾಗಿದೆ ಎನ್ನುವುದು ನಿಜ. ನಿಪಿ.4 ವಿಲ್ ಗೆ ಸಹಿ ಹಾಕಿರುವ ಸಾಕ್ಷಿದಾರ ಮೋಹನ್ ಭಕ್ತವತ್ಸಲ ನನ್ನ ತಂದೆಯಾಗಬೇಕು. ನಿಪಿ.4 ವಿಲ್ ನ ಉಳಿದ ಸಾಕ್ಷಿದಾರರನ್ನು ನ್ಯಾಯಾಲಯದಲ್ಲಿ ವಿಚಾರಣೆ ಮಾಡುತ್ತೇನೆ. ನನ್ನ ಮಾವನ ಆರೋಗ್ಯ ಸರಿಯಿರಲಿಲ್ಲ ಮತ್ತು ಆತ ನಿಪಿ.4 ವಿಲ್ ನ್ನು ಮಾಡಿಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ನನ್ನ ತಂದೆ ಈ ಸೃಷ್ಟಿ ಮಾಡಿದ ವಿಲ್ ಗೆ ಸಾಕ್ಷಿದಾರನಾಗಿ ಸಹಿ ಮಾಡಿದ್ದಾನೆ ಎನ್ನುವುದು ಸರಿಯಲ್ಲ. ನನ್ನ ತಂದೆ ತೀರಿಕೊಂಡ ಮೇಲೆ 1 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಖಾತೆ ಕಂದಾಯ ಇರುತ್ತದೆ ಎಂದರೆ ಸಾಕ್ಷಿ 1 ನೇ ಪ್ರತಿವಾದಿ ಅಕ್ರಮವಾಗಿ ಮಾಡಿಕೊಂಡಿದ್ದ ಎನ್ನುತ್ತಾರೆ. ದಾವಾ ಆಸ್ತಿ ಪ್ರತಿವಾದಿಯರಿಗೆ ಸೇರತಕ್ಕದ್ದಾಗಿದೆ ಎನ್ನುವುದು ಸರಿಯಲ್ಲ. ನನ್ನ ಮಾವ ಯಾವುದೇ ವಿಲ್ ಮಾಡಿಕೊಟ್ಟಿರದೆ ಇದ್ದರು ಕೂಡ ಅದನ್ನು ನಾನೇ ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎನ್ನುವುದು ಸರಿಯಲ್ಲ. ಮಗ ಮತ್ತು ಹೆಂಡತಿಯನ್ನು ಹೊರತುಪಡಿಸಿ, ಸೊಸೆಯ ಪರವಾಗಿ ಏಕೆ ವಿಲ್ ಮಾಡುತ್ತಿದ್ದೇನೆ ಎಂದು ವಿಲ್ ನಲ್ಲಿ ನಮೂದಿಸಿಲ್ಲ ಎನ್ನುವುದು ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ ನಂ.3 ಮತ್ತು 4 ರವರು ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**